ಕೈಗಾರಿಕೆಗಳಿಗೆ ಸಹಾಯಧನ ನೀಡುವುದು

೧೩೦೮ (೨೨೬೪) ಶ್ರೀ ಆರ್. ವೆಂಕಟರಾವಾಯ್ಯ (ಮುಳಬಾಗಿಲು).—ಮಾನ್ಯ ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ೧೯೮೫-೮೬ನೇ ಇಸವಿಯಿಂದ ರಾಜ್ಯದಲ್ಲಿ ಹೊಸದಾಗಿ ಪ್ರಾರಂಭಿಸಿ ನಡೆಯುತ್ತಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು ?

ಆ) ಮೇಲ್ಕಂಡ ಅವಧಿಯಲ್ಲಿ ಈ ಕೈಗಾರಿಕೆಗಳಿಗೆ ನಗದು ಸಹಾಯಧನವಾಗಿ ನೀಡಿದ ಒಟ್ಟು ಮೊತ್ತ?

ಇ) ನಗದು ಸಹಾಯಧನದ ಅಡಿಯಲ್ಲಿ ಫಲಾನುಭವಿಗಳಿಗೆ ಇನ್ನು ಹಣ ಸಂದಾಯವಾಗ ಬೇಕಾಗಿದೆಯೇ, ಇದ್ದಲ್ಲಿ ೧೯೮೫-೮೬ ರಿಂದ ಸಂದಾಯ ಮಾಡಬೇಕಾದ ಉಳಿಕೆ ಅಥವಾ ಬಾಕಿ ಒಟ್ಟು ಹಣ ಎಷ್ಟು ?

ಶ್ರೀ ಜೆ. ಹೆಚ್. ಪಟೀಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ)

	ಭಾರಿ ಮತ್ತು ಮಧ್ಯಮ	ಸಣ್ಣ ಕೈಗಾರಿಕೆಗಳು	ಒಟ್ಟು
೧೯೮೫-೮೬	೩೧	೧೧೬೩೪	೧೧೬೬೫
೧೯೮೬-೮೭	೪೦	೧೧೧೮೯	೧೧೨೧೯
೧೯೮೭-೮೮	೩೨	೧೦೫೩೦	೧೦೫೬೨

ಆ) ಮೇಲ್ಕಂಡ ಅವಧಿಯಲ್ಲಿ ಈ ಕೈಗಾರಿಕೆಗಳಿಗೆ ಕೊಡಲಾದ ನಗದು ಸಹಾಯಧನ ಈ ಕೆಳಕಂಡಂತಿದೆ :

	ರಾಜ್ಯ ಸಹಾಯಧನ (ಲಕ್ಷ ರೂ.ಗಳಲ್ಲಿ)	ಕೇಂದ್ರ ಸಹಾಯಧನ (ಲಕ್ಷ ರೂ.ಗಳಲ್ಲಿ)
೧೯೮೫-೮೬	೩೩೧.೩೩	೬೫೫.೧೭
೧೯೮೬-೮೭	೩೮೫.೬೯	೬೭೪.೯೭
೧೯೮೭-೮೮	೨೨೬.೨೨	೧೯೪.೫೨

ಇ) ಹೌದು.

ರಾಜ್ಯ ಸಹಾಯಧನ (ಲಕ್ಷ ರೂ.ಗಳಲ್ಲಿ)	ಕೇಂದ್ರ ಸಹಾಯಧನ (ಲಕ್ಷ ರೂ.ಗಳಲ್ಲಿ)
೧೧೧೧.೨೫	೬೩೮.೪೯

ಅಧ್ಯಕ್ಷರು.—ಉತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಆರ್ಜಿಗಳನ್ನೊಪ್ಪಿಸುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಎಸ್.ಎಲ್.ಬಿ.ಎಸ್. ಸಂಯುಕ್ತ ಪದವಿ ಪೂರ್ವ ಕಾಲೇಜು ಯಾದಗೂಡ ಇದನ್ನು ವೇತನ ಅನುದಾನಕ್ಕೆ ಒಳಪಡಿಸುವ ಬಗ್ಗೆ ಶ್ರೀ ದುರದುಂಡೀಶ್ವರ ಸಂವರ್ಧಕ ಸಂಘದ ಅಧ್ಯಕ್ಷರವರ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನು ಸಭೆಗೆ ಒಪ್ಪಿಸಲಾಯಿತು.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್.—ಮಾನ್ಯ ಶ್ರೀ ಕೆ. ಕುಶಾಲ ಅವರ ಪರವಾಗಿ ಅವರ ಹೆಸರಿನ ಮುಂದೆ ಇರುವ ಈ ಕೆಳಗೆ ಕಾಣಿಸಿರುವ ಅರ್ಜಿಗಳನ್ನು ಸಭೆಗೆ ಒಪ್ಪಿಸುತ್ತೇನೆ.